# ಶಾಲೆಗಳಿಂದ ಹೊರಗುಳಿದ ‘ನಾಳೆಯ ಪ್ರಜೆಗಳು’ ಇದು ಸರ್ಕಾರ ಬದ್ಧತೆ ಪ್ರದರ್ಶಿಸಬೇಕಾದ ಸಮಯ

ಶಾಲೆಗೆ ಹಿಂತಿರುಗಿದ ಮಕ್ಕಳ ಕಲಿಕೆಗೆ ಶಕ್ತಿ ತುಂಬಲು ಮಾರ್ಗೋಪಾಯಗಳಿವೆ. ಆದರೆ, ಶಾಲೆಯ ದಾರಿಯನ್ನೇ ಮರೆತವರ ಪಾಡು? ಕಲಿಕೆಯಲ್ಲಿ ಆಗಿರುವ ಹಿನ್ನಡೆಗಿಂತ ಶಾಲೆ ತೊರೆದವರನ್ನು ಮತ್ತೆ ಶಾಲೆಗೆ ಸೇರಿಸುವುದು, ಕಲಿಕೆಯಲ್ಲಿ ತೊಡಗಿಸುವುದು ಹೆಚ್ಚು ಕ್ಲಿಷ್ಟಕರವಾದ ಸಮಸ್ಯೆ.

ತಮ್ಮ ಕಲಿಕೆಯ ಜೀವನದ ಎರಡು ಸುವರ್ಣ ವಸಂತಗಳನ್ನು ಮಕ್ಕಳಿಂದ ಕೋವಿಡ್ ಕಸಿದುಕೊಂಡಿದೆ. ಮಕ್ಕಳು ಶಾಲೆಗೆ ಮರಳಿ, ಕಲಿಕೆಯಲ್ಲಿ ಆಗಿರುವ ಹಿನ್ನಡೆಯನ್ನು ತುಂಬಿಕೊಳ್ಳುವ ಧಾವಂತದಲ್ಲಿದ್ದಾರೆ. ಕಲಿಕಾ ಪ್ರಕ್ರಿಯೆ ಸಹಜ ಲಯ ಕಂಡುಕೊಳ್ಳಲಿ ಎನ್ನುವ ಕಾತರ ಪೋಷಕರಲ್ಲಿ ಮನೆಮಾಡಿದೆ. ಆ ಮಟ್ಟಿಗೆ ಕಾತರದಿಂದ ಕಾಯುವಂತಹ, ಕಳವಳಪಡುವಂತಹ ಪಲ್ಲಟಗಳನ್ನು ಕೊರೊನಾ ಸಾಂಕ್ರಾಮಿಕವು ಶಿಕ್ಷಣ ಕ್ಷೇತ್ರದಲ್ಲಿ ಉಂಟುಮಾಡಿದೆ.

ಈ ಹಿಂದಿನ ಎರಡು ವರ್ಷಗಳಲ್ಲಿ ಶಾಲೆಗಳಲ್ಲಿ ಮಕ್ಕಳ ಕಲಿಕೆ ಯಾವ ಮಟ್ಟದಲ್ಲಿತ್ತು ಎಂಬುದರ ಕುರಿತು ಈಚೆಗೆ ಬಿಡುಗಡೆಯಾದ ‘ರಾಷ್ಟ್ರೀಯ ಸಾಧನೆ ಸಮೀಕ್ಷೆ–2021’ ವರದಿ ಬೆಳಕು ಚೆಲ್ಲಿದೆ. ಒಟ್ಟು 34 ಲಕ್ಷ ವಿದ್ಯಾರ್ಥಿಗಳು ಈ ಸಮೀಕ್ಷೆಯಲ್ಲಿ ಭಾಗವಹಿಸಿದ್ದರು. ದೇಶದ 720 ಜಿಲ್ಲೆಗಳಲ್ಲಿ ಸಮೀಕ್ಷೆ ನಡೆದಿದೆ. 2017ರಲ್ಲಿ ನಡೆದ ಸಮೀಕ್ಷೆಗೆ ಹೋಲಿಸಿದರೆ, ಮಕ್ಕಳ ಕಲಿಕೆಯ ಮಟ್ಟ ತೀವ್ರವಾಗಿ ಕುಸಿದಿರುವುದನ್ನು ಈ ಸಮೀಕ್ಷೆ ಗುರುತಿಸಿದೆ.

ಕರ್ನಾಟಕದಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಮಕ್ಕಳು ಈ ಸಮೀಕ್ಷೆಯಲ್ಲಿ ಭಾಗವಹಿಸಿದ್ದರು. ಸರ್ಕಾರಿ, ಖಾಸಗಿ ಮತ್ತು ಕೇಂದ್ರೀಯ ಶಾಲೆಗಳ ಮಕ್ಕಳು ಸಮೀಕ್ಷೆಗೆ ಒಳಗಾಗಿದ್ದರು. ಮೂರನೇ ತರಗತಿಯ ಅರ್ಧಕ್ಕಿಂತ ಹೆಚ್ಚು ಮಕ್ಕಳಲ್ಲಿ ಭಾಷೆ, ಗಣಿತ ಮತ್ತು ಪರಿಸರ ಅಧ್ಯಯನದಲ್ಲಿ ಕನಿಷ್ಠ ಮಟ್ಟದ ಕಲಿಕೆ ಸಾಧ್ಯವಾಗುತ್ತಿಲ್ಲ ಎಂಬ ಅಂಶವನ್ನು ಸಮೀಕ್ಷೆ ತೆರೆದಿಟ್ಟಿದೆ. ಅಂತೆಯೇ, ಐದನೇ ತರಗತಿಯ ಮುಕ್ಕಾಲುಪಾಲು ಮಕ್ಕಳಿಗೆ ಗಣಿತ ಮತ್ತು ಪರಿಸರ ಅಧ್ಯಯನದ ಪಾಠಗಳನ್ನು ಕಲಿಯಲು ಹೆಚ್ಚಿನ ನೆರವು ಬೇಕಿದೆ ಎಂದೂ ಹೇಳಿದೆ.

ಕಲಿಕೆಯಲ್ಲಿ ಆಗಿರುವ ಈ ಬಗೆಯ ಹಿನ್ನಡೆಗಳನ್ನು ಸರಿದೂಗಿಸುವ ಸಲುವಾಗಿ 2022–23ನೇ ಶೈಕ್ಷಣಿಕ ವರ್ಷವನ್ನು ‘ಕಲಿಕಾ ಚೇತರಿಕೆ ವರ್ಷ’ ಎಂದು ಕರ್ನಾಟಕ ಸರ್ಕಾರ ಘೋಷಿಸಿದೆ. ಮಕ್ಕಳ ಕಲಿಕೆಯನ್ನು ಪುನಃ ಹಳಿಗೆ ತರುವ ಇಂತಹ ಪ್ರಯತ್ನಗಳು ಸ್ವಾಗತಾರ್ಹ. ಶಾಲೆಗೆ ಹಿಂತಿರುಗಿದ ಮಕ್ಕಳ ಕಲಿಕೆಗೆ ಶಕ್ತಿ ತುಂಬಲು ಮಾರ್ಗೋಪಾಯಗಳಿವೆ. ಅವುಗಳನ್ನು ಶೋಧಿಸುವುದು, ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಕಷ್ಟವೇನಲ್ಲ. ಆದರೆ, ಶಾಲೆಯ ದಾರಿಯನ್ನೇ ಮರೆತವರ ಪಾಡು? ಕಲಿಕೆಯಲ್ಲಿ ಆಗಿರುವ ಹಿನ್ನಡೆಗಿಂತ ಶಾಲೆ ತೊರೆದವರನ್ನು ಮತ್ತೆ ಶಾಲೆಗೆ ಸೇರಿಸುವುದು, ಕಲಿಕೆಯಲ್ಲಿ ತೊಡಗಿಸುವುದು ಹೆಚ್ಚು ಕ್ಲಿಷ್ಟಕರವಾದ ಸಮಸ್ಯೆ.

ಕರ್ನಾಟಕದಲ್ಲಿ ಶಾಲಾ ಮಕ್ಕಳ ದಾಖಲಾತಿಯಲ್ಲಿ ತೀವ್ರ ಕುಸಿತ ಆಗಿರುವುದನ್ನು ಕೇಂದ್ರ ಶಿಕ್ಷಣ ಸಚಿವಾಲಯದ ದತ್ತಾಂಶಗಳೇ ಎತ್ತಿತೋರಿಸಿವೆ. ದೇಶದಲ್ಲಿ 2019–20ನೇ ಶೈಕ್ಷಣಿಕ ಸಾಲಿಗೆ ಹೋಲಿಸಿದರೆ, 2020–21ನೇ ಸಾಲಿನಲ್ಲಿ ಶಾಲಾ ಮಕ್ಕಳ ದಾಖಲಾತಿಯಲ್ಲಿ (1ರಿಂದ 12ನೇ ತರಗತಿ) ಗಣನೀಯ ಏರಿಕೆ ಆಗಿದೆ. ಆದರೆ, ಕರ್ನಾಟಕದಲ್ಲಿ ಮಾತ್ರ 2.82 ಲಕ್ಷದಷ್ಟು ಕುಸಿತ ಕಂಡಿದೆ ಎಂದು ವರದಿಯಾಗಿದೆ. ಇದು, ನಿಸ್ಸಂದೇಹವಾಗಿ ಕಳವಳ ಮೂಡಿಸುವಂತಹ ಸಂಗತಿ. ಆದರೆ, 2020–21ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಪ್ರಮಾಣವು 1.25 ಲಕ್ಷದಷ್ಟು ಹೆಚ್ಚಳ ಕಂಡಿದೆ.

ಕೋವಿಡ್ ಕಾರಣದಿಂದ ಆದ ಉದ್ಯೋಗ ನಷ್ಟ, ಸಂಬಳ ಕಡಿತ, ವ್ಯಾಪಾರ–ವ್ಯವಹಾರದಲ್ಲಿ ಆಗಿರುವ ನಷ್ಟ... ಈ ಬಗೆಯ ಆರ್ಥಿಕ ಪಲ್ಲಟಗಳು ಮಕ್ಕಳ ಶಿಕ್ಷಣ – ಶಾಲೆಯ ಆಯ್ಕೆಯ ಮೇಲೂ ಪರಿಣಾಮ ಬೀರಿರುವ ಸಾಧ್ಯತೆ ಹೆಚ್ಚು. ಶುಲ್ಕ ಭರಿಸಲು ಅಶಕ್ತರಾದ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಂದ ಬಿಡಿಸಿ ಸರ್ಕಾರಿ ಶಾಲೆಗಳಿಗೆ ಸೇರಿಸಿರಬಹುದು. ಮಕ್ಕಳು ಮಧ್ಯದಲ್ಲೇ ಶಾಲೆ ತೊರೆಯಲು ಅಥವಾ ಶಾಲೆಗೆ ಸೇರದೇ ಇರಲು ಕೂಡ ಇವೇ ಅಂಶಗಳು ಕಾರಣಗಳಾಗಿರುವ ಸಾಧ್ಯತೆ ಇದೆ. ಮಕ್ಕಳನ್ನು ದುಡಿಮೆಗೆ ದೂಡಿರಬಹುದಾದ ಸಾಧ್ಯತೆ ಇದ್ದೇ ಇದೆ.

ರಾಜ್ಯದಲ್ಲಿ ಅಂಗನವಾಡಿಗಳಿಂದ 9.87 ಲಕ್ಷ ಮಕ್ಕಳು ಹೊರಗುಳಿದಿರುವ ಅಂಶವೂ ಸಮೀಕ್ಷೆಯೊಂದರಿಂದ ಈಚೆಗೆ ಬೆಳಕಿಗೆ ಬಂದಿದೆ. ಈ ಕುರಿತ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಲಾಗಿದೆ. ಇದು ಕೂಡ ಕಳವಳ ಮೂಡಿಸುವಂತಹ ವಿಷಯ.

ಕಾರಣಗಳು ಏನೇ ಇರಲಿ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ, ಅವರನ್ನು ಸುರಕ್ಷಿತವಾಗಿ ಪುನಃ ಶಾಲೆಗೆ ಕರೆತರುವುದು ಆದ್ಯತೆಯ ಮೇರೆಗೆ ತುರ್ತಾಗಿ ಆಗಬೇಕಾಗಿರುವ ಕೆಲಸ. ಈ ಸಲುವಾಗಿ ಕ್ರಿಯಾಯೋಜನೆಯೊಂದನ್ನು ಸರ್ಕಾರ ರೂಪಿಸಬೇಕು ಮತ್ತು ಅದನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಬೇಕು. ಉಪೇಕ್ಷೆಯು ಮಕ್ಕಳ ಭವಿಷ್ಯಕ್ಕೆ ಮಾರಕವಾಗಿ ಪರಿಣಮಿಸುವ ಅಪಾಯ ಇದೆ. ಮಕ್ಕಳನ್ನು ಯಾವುದೇ ಕಾರಣಕ್ಕೂ ಕಲಿಕೆಯಿಂದ ವಂಚಿತರಾಗಲು ಬಿಡಬಾರದು. ಈ ದಿಸೆಯಲ್ಲಿ ಸರ್ಕಾರ ತನ್ನ ಬದ್ಧತೆಯನ್ನು ಪ್ರದರ್ಶಿಸಬೇಕು.


ಈಶ್ವರ್

■ ಎನ್. ಉದಯಕುಮಾರ್